

## ಮುತ್ತಿನ ಉಡುಪು: ಟಿಪ್ಸ್

- ಪರ್ಲ್ಸ್ ಡಿಸೈನರ್ ವೇರ್‌ಗಳನ್ನು ಧರಿಸುವವರು ಆದಷ್ಟು ಕಡಿಮೆ ಆಭರಣ ಧರಿಸುವುದು ಒಳ್ಳೆಯದು. ಕಾರಣ ಉಡುಪುಗಳಲ್ಲಿಯೇ ಪರ್ಲ್ಸ್ ಅಳವಡಿಸಿರುವುದರಿಂದ ನಿಮ್ಮ ಉಡುಪು ಸಾಕಷ್ಟು ಗ್ರ್ಯಾಂಡ್ ಆಗಿಯೇ ಕಾಣುತ್ತದೆ.
- ವಾಷಿಂಗ್ ಮೆಷಿನ್‌ನಲ್ಲಿ ಈ ತರಹದ ಉಡುಪುಗಳನ್ನು ವಾಷ್ ಮಾಡಲು ಸಾಧ್ಯವಿಲ್ಲ. ಮುತ್ತುಗಳು ಒಡೆದುಹೋಗುವ ಸಾಧ್ಯತೆಗಳಿರುತ್ತದೆ. ಆದ್ದರಿಂದ ಕೈಗಳಿಂದಲೇ ಒಗೆಯುವುದು ಉತ್ತಮ.
- ಕೈಯಿಂದ ವಾಷ್ ಮಾಡಿದ ನಂತರ ಉಡುಪುಗಳನ್ನು ಉಲ್ಟಾ ಮಾಡಿ ಹ್ಯಾಂಗರ್‌ಗೆ ಹಾಕಿ ಒಣಗಿಸಬೇಕು. ನೆರಳಿನಲ್ಲಿ ಮಾತ್ರ ಒಣಗಿಸಿ. ಬಿಸಿಲಿನಿಂದ ಬಣ್ಣ ಹಾಳಾಗುವ ಸಾಧ್ಯತೆ ಹೆಚ್ಚು.
- ಬಟ್ಟೆ ಮಡಿಸಿಟ್ಟರೆ ಸುಕ್ಕು ಬರುತ್ತದೆ, ಆದ್ದರಿಂದ ಚೆನ್ನಾಗಿ ಒಣಗಿಸಿ, ಹ್ಯಾಂಗರ್‌ಗೆ ಹಾಕಿ ತೆಗೆದಿಟ್ಟುಕೊಳ್ಳಬೇಕು.

ಹರಳಿನ ಪೆಂಡೆಂಟ್ ಧರಿಸುತ್ತಿದ್ದರು. ತಮ್ಮ ಎಲ್ಲ ಬಂಗಾರದ ಆಭರಣಗಳ ಜೊತೆ ಮುತ್ತಿನ ಸರ ಇರಲೇಬೇಕು. ಇದರ ಜೊತೆಗೆ ತಲೆಯಲ್ಲಿ ಧರಿಸುತ್ತಿದ್ದ ಪೇಟ ಅಥವಾ ಕಿರೀಟದ ಅಲಂಕಾರಕ್ಕೂ ಈ ಮುತ್ತುಗಳನ್ನೇ ಬಳಸಲಾಗುತ್ತಿತ್ತು.

ರಾಣಿಯರು ಎಂದರೆ ಕೇಳಬೇಕೆ ತಾವು ಧರಿಸುವ ಆಭರಣಗಳ ಜೊತೆಗೆ ಮುತ್ತಿನ ಒಡವೆಗಳಿಗೂ ಪ್ರತ್ಯೇಕ ಸ್ಥಾನ ನೀಡಿದ್ದರು. ಮುತ್ತಿನ ಸರಮಾಲೆಗಳು, ಮುತ್ತಿನ ಬಳೆಗಳು, ಮುತ್ತಿನ ಬಾಜುಬಂದ್, ಮುತ್ತಿನ ಸೊಂಟಪಟ್ಟಿ, ಕಾಲುಗೆಜ್ಜೆ , ಕಿವಿಯೋಲೆ ಹೀಗೆ ಸಾಲು ಸಾಲಾಗಿ ಮುತ್ತಿನ ಒಡವೆ ಧರಿಸುತ್ತಿದ್ದ ಅವರ ಸೌಂದರ್ಯ ಇಮ್ಮಡಿಗೊಳ್ಳುತ್ತಿತ್ತು.

ಇತ್ತೀಚೆಗೆ ಫ್ಯಾಷನ್ ತಜ್ಞರು ಮುತ್ತಿನ ಬಗ್ಗೆ ಮಹಿಳೆಯರಿಗೆ ಇರುವ ಕ್ರೇಜ್ ಕಂಡು ಇನ್ನೊಂದು ವಿನೂತನ ಪ್ರಯೋಗಕ್ಕೆ ಕೈ ಹಾಕಿದ್ದಾರೆ ಅದುವೇ ಮುತ್ತಿನ ಉಡುಗೆ. ಫ್ಯಾಷನ್ ಪ್ರಾರಂಭವಾಗುವುದೇ ಸಿನಿಮಾ ತಾರೆಯರು ಹಾಗೂ ಸೆಲೆಬ್ರಿಟಿಗಳಿಂದ. ಹೀಗಿರುವಾಗ ಸೆಲೆಬ್ರಿಟಿಗಳು ತಾವು ಹೋಗುವ ಯಾವುದೇ ಕಾರ್ಯಕ್ರಮಕ್ಕೂ ಈ ತರಹದ ಮುತ್ತಿನುಡುಗೆಗಳನ್ನು ಧರಿಸಿ ಸಖತ್ತಾಗಿ ಮಿಂಚುತ್ತಿದ್ದಾರೆ. ಇದು ಸಾಮಾನ್ಯ ಯುವತಿಯರ ಕಣ್ಣು ಕುಕ್ಕುತ್ತಿರುವುದಂತೂ ಸುಳ್ಳಲ್ಲ. ಬರೀ ಸೆಲೆಬ್ರಿಟಿಗಳು, ತಾರೆಯರು ಮಾತ್ರವಲ್ಲ ರ‍್ಯಾಂಪ್ ಮೇಲೆ ಹೆಜ್ಜೆ ಹಾಕುವ ಮಾಡೆಲ್‌ಗಳೂ ತಮ್ಮ ಡ್ರೆಸ್‌ಗಳ ಜೊತೆ ಈ ಮುತ್ತಿನ ಸರಮಾಲೆಗಳನ್ನು ವಿವಿಧ ವಿನ್ಯಾಸದಲ್ಲಿ ಅಳವಡಿಸಿಕೊಂಡು ಧರಿಸುತ್ತಿದ್ದಾರೆ. ವಿವಿಧ ಗಾತ್ರ, ಬಣ್ಣಗಳಲ್ಲಿ ದೊರೆಯುವ ಮುತ್ತಿನ ಉಡುಗೆಗಳು ಯುವತಿಯರನ್ನು ಸೂಜಿಗಲ್ಲಿನಂತೆ ತಮ್ಮತ್ತ ಸೆಳೆಯುತ್ತಿವೆ.

ಶುಭ ಸಮಾರಂಭಗಳಲ್ಲಿ ಯುವತಿಯರು ಮುತ್ತಿನ ಆಭರಣಗಳ ಜೊತೆಗೆ ಇದೇ ಮುತ್ತಿನಿಂದ ತಯಾರಿಸಲಾದ ಉಡುಗೆಗಳನ್ನು ಧರಿಸಲು ಆಸಕ್ತಿ ತೋರುತ್ತಿದ್ದಾರೆ. ಮುತ್ತಿನಿಂದ ಅಲಂಕರಿಸಲ್ಪಟ್ಟ ಸೀರೆಗಳು, ಬ್ಲೌಸ್‌ಗಳು, ಗೌನ್‌ಗಳು ಟ್ರೆಂಡ್ ಸೃಷ್ಟಿಸಿವೆ. ಅದರಲ್ಲೂ ವೈಟ್, ಕ್ರೀಮ್, ಐವರಿ, ಸ್ಮಾಲ್, ಬಿಗ್, ಮೀಡಿಯಂ ಪರ್ಲ್ಸ್‌ನಿಂದ ತಯಾರಿಸಲಾದ ಉಡುಪುಗಳು ಎಥ್ನಿಕ್ ಹಾಗೂ ಇಂಡೋ ವೆಸ್ಟರ್ನ್ ಶೈಲಿಯಲ್ಲಿ ಹೆಚ್ಚು ಪ್ರಚಲಿತವಾಗುತ್ತಿವೆ.

ಆಧುನಿಕ, ಸಾಂಪ್ರದಾಯಿಕ ಎರಡೂ ರೀತಿಯ ಮನೋಭಾವದವರಿಗೆ ಸೂಕ್ತವಾಗುವಂತೆ ಈ ಉಡುಗೆಗಳನ್ನು ಡಿಸೈನ್ ಮಾಡಿರುವುದರಿಂದ ಯಾರು ಬೇಕಾದರೂ ಉಡುಪು ಒಡವೆಗಳನ್ನು ತೊಟ್ಟು ಸಂಭ್ರಮಿಸಬಹುದು. ಐವರಿ ಶೇಡ್ ಇರುವ ಸಣ್ಣ ಹಾಗೂ ದೊಡ್ಡ ಫ್ರಾಕ್ಸ್, ಟಾಪ್ಸ್, ಲಾಂಗ್ ಗೌನ್ ಇದೀಗ ಹೆಚ್ಚು ಬೇಡಿಕೆಯಲ್ಲಿವೆ.



ಇನ್ನು ಬ್ರೈಡಲ್ ಪರ್ಲ್ ಡಿಸೈನರ್ ವೇರ್‌ಗಳಲ್ಲಿ ಮಿಲ್ಕಿ ವೈಟ್ ಜತೆಗೆ ಐವರಿ ಬೀಡ್ಸ್ ಇರುವಂಥವು ಮಹಿಳೆಯರ ಮನ ಗೆದ್ದಿವೆ. ನೋಡಲು ಅತ್ಯಂತ ಆಕರ್ಷಕವಾಗಿಯೂ ಕಾಣುತ್ತವೆ. ಬ್ರೈಡಲ್ ಸೀರೆಗಳ ಜೊತೆ ಡಿಸೈನರ್ ಪರ್ಲ್ಸ್ ಬ್ಲೌಸ್‌ಗಳು ಅತ್ಯಂತ ರಿಚ್ ಲುಕ್ ನೀಡುತ್ತವೆ. ಹಾಗೇ ಡಿಸೈನರ್ ಗೌನ್‌ಗಳು ಯುವತಿಯರ ಹಾಟ್ ಫೇವರೆಟ್ ಅಂತಲೇ ಹೇಳಬಹುದು.

ಮೊದಲೆಲ್ಲಾ ಈ ತರಹದ ಉಡುಪುಗಳ ನಿರ್ವಹಣೆ ಕಷ್ಟ ಎಂದು ಹಿಂಜರಿಯುತ್ತಿದ್ದ ಹುಡುಗಿಯರು ಇತ್ತೀಚೆಗೆ ಇದೇ ಬಗೆಯ ಉಡುಪಿಗೆ ಮಾರುಹೋಗಿದ್ದಾರೆ. ನಿರ್ವಹಣೆ ಕಷ್ಟವಾದರೂ ಸ್ಟೈಲಿಷ್ ಆಗಿ ಕಾಣುವ ಕಾರಣ ಟೋರ್ನ್, ಪ್ಯಾಚ್, ರಿಪ್ಡ್ ಸೇರಿದಂತೆ ನಾನಾ ಬಗೆಯ ಜೀನ್ಸ್‌ನಲ್ಲಿ ಎಂಬ್ರಾಯಿಡರಿ ಜತೆಗಿರುವ ಪರ್ಲ್ ಡಿಸೈನ್ ಪ್ಯಾಂಟ್‌ಗಳನ್ನು ಧರಿಸುತ್ತಿದ್ದಾರೆ. ಇವು ಇತ್ತೀಚೆಗೆ ಟ್ರೆಂಡಿಯಾಗಿದೆ. ಇವುಗಳ ಜೊತೆ ಜೀನ್ಸ್ ಹಾಗೂ ಡೆನಿಮ್ ಜಾಕೆಟ್ ಮೇಲೆ ಕೂಡ ಎಂಬ್ರಾಯಿಡರಿ ಜೊತೆಗೆ ಮಿಲ್ಕಿ ವೈಟ್ ಪರ್ಲ್‌ಗಳನ್ನು ಅಳವಡಿಸುತ್ತಿದ್ದಾರೆ.

ಕೆಲವು ಉಡುಪುಗಳು ಸಿಂಪಲ್ ಆಗಿದ್ದರೂ ಅದಕ್ಕೆ ಪರ್ಲ್ಸ್ ಟಚಪ್ ನೀಡಿದರೆ ಇನ್ನೂ ಸಖತ್ತಾಗಿ ಕಾಣುತ್ತವೆ. ಸಾಮಾನ್ಯವಾಗಿ ಎಲ್ಲ ಮಹಿಳೆಯರು ಸಮಾರಂಭಗಳಲ್ಲಿ ತುಂಬಾ ಗ್ರ್ಯಾಂಡ್ ಲುಕ್ ನೀಡುವ ಈ ತರಹದ ಮುತ್ತಿನ ಉಡುಗೆಗಳನ್ನು ಧರಿಸಲು ಬಯಸುತ್ತಾರೆ. ಆದರೆ ಕೆಲವು ಮಹಿಳೆಯರು ಸಿಂಪಲ್ ಆಗಿ ಇರಲು ಬಯಸುತ್ತಾರೆ. ಅವರೂ ಕೂಡ ಸೀರೆಯ ಅಂಚು, ಸೆರಗಿನಲ್ಲಿ ಮುತ್ತಿನ ಸಿಂಪಲ್ ಡಿಸೈನ್ ಮಾಡಿಸಿಕೊಂಡು ಧರಿಸಬಹುದು. ■